# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/119/2015-16

ದಿನಾಂಕ:22.09.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| 1.ಗಜೇಂದ್ರ ಕುಮಾರ ಮೈ.ಗಾ.ಸಾವಿತ್ರಮ್ಮ ಗಂಡ ಜಗದೀಶ<br>2.ವಿಜಯ ಕುಮಾರ ಮೈ.ಗಾ. ಸಾವಿತ್ರಮ್ಮ ಗಂಡ ಜಗದೀಶ<br>ಗ್ರಾಮ:-ಬೆಣಕಲ್ಲು ತಾ:-ಹೆಚ್.ಬಿ.ಹಳ್ಳಿ<br>[ಶ್ರೀ ಕೊಟ್ರೇಶ ಹಿರೇಮಠ, ವಕೀಲರು, ಹೊಸಪೇಟೆ] | ಪಿ.ವೀರಪ್ಪ ತಂದೆ ಎಲಿಗಾರ ಗುರುಬಸಪ್ಪ<br>ಗ್ರಾಮ:-ಬೆಣಕಲ್ಲು ತಾ:-ಹೆಚ್.ಬಿ.ಹಳ್ಳಿ<br>[ಶ್ರೀ ಹೆಚ್.ಮಹಾಲಿಂಗಪ್ಪ, ವಕೀಲರು,<br>ಹ.ಬೊ.ಹಳ್ಳಿ] |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಬೆಣಕಲ್ಲು | 445/ಬಿ | 6-35 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಬೆಣಕಲ್ಲು ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಬೆಣಕಲ್ಲು ಗ್ರಾಮದ ನಿವಾಸಿಯಾದ 1.ಗಜೇಂದ್ರ ಕುಮಾರ ಮೈ.ಗಾ.ಸಾವಿತ್ರಮ್ಮ ಗಂಡ ಜಗದೀಶ 2.ವಿಜಯಕುಮಾರ ಮೈ.ಗಾ.ಸಾವಿತ್ರಮ್ಮ ಗಂಡ ಜಗದೀಶ ಇವರ ಹೆಸರಿಗೆ ನೋಂದಾಯಿತ ವಿಲ್ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್.-3-00016 2004-05 ದಿನಾಂಕ:12.01.2005 ರಪ್ರಕಾರ ಹಕ್ಕು ಬದಲಾವಣೆಯನ್ನು ಮಾಡಲು ದಿನಾಂಕ:12.04.2016 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸನ್ನು ದಿನಾಂಕ:16.04.2016 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:06.05.2016 ರಂದು ಪಿ.ವೀರಪ್ಪ ತಂದೆ ಎಲಿಗಾರ ಗುರುಬಸಪ್ಪ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.99/15-16ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ರವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:09.06.2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:09.06.2016 ರಿಂದ 08.09.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಹಾಜರಾಗಿ ಹೇಳುವಂತೆ; ವಿಲ್ ಪ್ರಕಾರ ನಮ್ಮಗಳ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಕೋರಿರುತ್ತಾರೆ. ತಕರಾರುದಾರ ಪರ ಹೆಚ್.ಮಹಾಲಿಂಗಪ್ಪ ಇವರು ತಮ್ಮ ವಕಾಲತ್ತು ಅರ್ಜಿಯನ್ನು ದಿನಾಂಕ:23.06.2016 ರಂದು ಸಲ್ಲಿಸಿ ಹೇಳುವಂತೆ; ಸದರಿ ಜಮೀನು ಮೂಲತ: ತಕರಾರುದಾರರ ತಂದೆಯವರ ಪಿತ್ರಾರ್ಜಿತ ಜಮೀನಾಗಿರುತ್ತದೆ ಹಾಗೂ ಸದರಿ ಪ್ರಕರಣದಲ್ಲಿ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಈ ಹಿಂದೆ ಓ.ಎಸ್.ಸಂಖ್ಯೆ 91/2005 ರನ್ವಯ ಮತ್ತು ತಹಶೀಲ್ದಾರವರ ಆದೇಶ ಸಂಖ್ಯೆ ಸಂ:ಕಂ:ವಿವಾದ:17/01 ದಿನಾಂಕ:14.04.2003 ರನ್ವಯ ಬೆಣಕಲ್ಲು ಗ್ರಾಮದ ಸ.ನಂ.445 ವಿಸ್ತೀರ್ಣ 6-35 ಎಕರೆ ಜಮೀನಿನಲ್ಲಿ ತಿರಸ್ಕೃತವಾಗಿರುವ ನಕಲು ಪ್ರತಿಯನ್ನು

-ಹಾಜರು ಪಡಿಸಿರುತ್ತಾರೆ. ಸದರಿ ದಿನಾಂಕ:23.06.2016 ರಂದು ಅರ್ಜಿದಾರರ ಪರ ಕೊಟ್ರೇಶ ಹಿರೇಮಠ, ವಕೀಲರು, ಹೊಸಪೇಟೆ ಇವರು ತಮ್ಮ ವಕಾಲತ್ತು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ದಿನಾಂಕ:11.08.2016 ರಂದು ಅರ್ಜಿದಾರರ ಪರ ವಕೀಲರು ಹಾಜರಾಗಿ ಹೇಳುವಂತೆ; ಒ.ಎಸ್.ನಂ91/2005 ದಿನಾಂಕ:23.03.2015 ರ ಅರ್ಜಿದಾರರಾದ ಹೆಚ್.ವೀರಪ್ಪ ತಂದೆ ಗುರುಬಸಪ್ಪ, ನೀಲಮ್ಮಗಂಡ ಹಾಲಪ್ಪ ಇವರು ಪಾಲು ವಿಭಾಗಕ್ಕೆ ಸಲ್ಲಿಸಿದ ಅರ್ಜಿ ವಜಾ ಆಗಿರುತ್ತದೆ. ಎಂದು ಸದರಿ ದೃಢೀಕೃತ ಆದೇಶದ ಪ್ರತಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ದಿನಾಂಕ:08.09.2016 ರಂದು ಉಭಯರು ಹಾಜರಾಗಿರುತ್ತಾರೆ. ಪ್ರಕರಣದಲ್ಲಿ ಅರ್ಜಿದಾರರು/ಪರ ವಕೀಲರು ಮತ್ತು ತಕರಾರುದಾರರು/ಪರ ವಕೀಲರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆಮಾಡಲಾಗಿ, ಸದರಿ ವಿಲ್ ದಸ್ತಾವೇಜಿಗೆ ಸಂಬಂಧಿಸಿದಂತೆ, ಆಕ್ಷೇಪಣೆ ಇರುವ ಕಾರಣ ಹಾಗೂ ತಕರಾರುದಾರರು ತಮ್ಮ ತಕರಾರುಅರ್ಜಿಯನ್ನು ಹಿಂದಕ್ಕೆ ಪಡೆಯದೇ ಇರುವುದರಿಂದ ಮತ್ತು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 128 ರನ್ವಯ ವಿಲ್/ಮರಣ ಪತ್ರವನ್ನು ಹೊಂದಿರುವಾತನ ಪರವಾಗಿ ಕಂದಾಯ ದಾಖಲೆಗಳಲ್ಲಿನ ನಮೂದುಗಳನ್ನು ಬದಲಾಯಿಸುವಲ್ಲಿ ಸದರಿ ವಿಲ್/ಮರಣ ಪತ್ರವನ್ನು ಜಾರಿಗೊಳಿಸುವಲ್ಲಿ ಯಾವುದೇ ದೂರು, ವಿವಾದ ಅಥವಾ ಆಕ್ಷೇಪಣೆಗಳಿಲ್ಲದಿದ್ದಲ್ಲಿ ಮಾತ್ರ ಬದಲಾಯಿಸಬಹುದು. ಆದರೆ, ಸದರಿ ಪ್ರಕರಣಕ್ಕೆ ಆಕ್ಷೇಪಣೆ/ತಕರಾರು ಇರುವ ಕಾರಣ ಈ ನ್ಯಾಯಾಲಯದ ವ್ಯಾಪ್ತಿಗೆ ಅಧಿಕಾರ ಇರುವುದಿಲ್ಲ. ಅದ್ದರಿಂದ ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆಮತ್ತು ಕಾರಣಗಳ ಆಧಾರದ ಮೇಲೆ ಹಾಗೂ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129 ರನ್ವಯ ಎಂ.ಆರ್.ನಂ.99/2015-16 ರ ಪ್ರಕಾರ, ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಹಾಗೂ ಉಭಯ ಪಕ್ಷಕಾರರು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ತಮ್ಮ ಹಕ್ಕನ್ನು ಸಾಭೀತು ಪಡಿಸಿಕೊಂಡು ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:22.09.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

22/9/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ
ಕೋಗಳಿ.

14/10/16

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಂದಾಯ ನಿರೀಕ್ಷಕರು, ಕೋಗಳಿ.
4. ಶುದ್ಧ ಪ್ರತಿ ಕಡತಕ್ಕೆ.